(b) if so the action taken by Government to restore the breached Malhar Tank in Yadgir Taluk, Gulburga District.

SRI H. D. DEVEGOWDA (Minister for Public Works, CAD and Irrigation).—

(a) Yes.

(b) Being investigation. If found feasible the work will be considered for sanction.

Minor Irrigation works in Gurumitkal assembly Constituency

35 (99) SRI S. MALLIKARJUN KHARGE (Gurumitkal).—Will the Minister for Public Works, Command Area Development and Irrigation be pleased to state ;

(a) the number of minor irrigation works investigated and sanctioned during 1982-83 and 1983-84 in Gurmitkal Assembly Constitutency, Yadgir Taluk, Gulbarga District ;

(b) the number of works in progress ;

(c) the amount spent so far on the sanctioned works and the amount spent on new works ?

SRI H.D.DEVEGOWDA (Minister for Public Works & Irrigation)—

		Investigated	Sanctioned
(a)	During 1982-83	One	One
	1983-84	Three	Nil

(b) On going works 6 Nos. and one freth work.

(c) Rs. 35.917 lakhs and 4.199 lakhs.

ಗಮನ ಸೆಳೆಯುವಂತ ಸೂಚನೆಗಳು

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮದ ದಿನಗೂಲಿ ನೌಕರರ ಉಪವಾಸ ಮಂಜಪ್ಪರ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮದ ನೌಕರರು ಅವರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಹೂಡಿರುವ ಉಪವಾಸ ಸತ್ಯಾಗ್ರಹದ ವಿಚಾರವನ್ನು ಅರಣ್ಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ವಿ. ಜೀ. ವಿಜಯು (ಅರಣ್ಯ ರಾಜ್ಯ ಸಚಿವಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಹಿಂದು ಹೇಳಿಕೆ ಸಭೆಯ ಮುಂದೆ ಕೊಡುವುದಕ್ಕೆ ಇಷ್ಟಪಡುತ್ತೇನೆ

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದಲ್ಲಿ ೧-೪-೧೯೮೨ರ ಹಿಂದಿನಿಂದ ೧೮೬ ದಿನಗೂಲಿ ನೌಕರರು ಕೆಲಸದಲ್ಲಿದ್ದಾರೆ. ಅದರಲ್ಲಿ ೫೦ ಜನ ಪದವೀಧರರು, ಪದವಿ ರಹಿತ ೬೬ ಜನ ಮತ್ತು ೭೦ ಜನ ಎಸ್ ಎಸ್. ಎಲ್ ಸಿ. ಗಿಂತ ಕಡಿಮೆ ಶಿಕ್ಷಣ ಪಡೆದವರು ಇದ್ದಾರೆ. ಪದವೀಧರರಿಗೆ ೧೫ ರೂ ಪದವೀಧರರಹಿತರಿಗೆ ರೂ. ೧೨ ಮತ್ತು ಎಸ್.ಎಸ್.ಎಲ್.ಸಿ ಗಿಂತ ಕಡಿಮೆ ಶಿಕ್ಷಣ ಪಡೆದವರಿಗೆ ರೂ. ೯ ನ್ನು ದಿನಗೂಲಿ ಕೊಡಲಾಗುತ್ತಿತ್ತು.

೧-೧-೧೯೮೫ ರಿಂದ ಸಂಸ್ಥೆಯ ನಿರ್ದೇಶಕರ ಮಂಡಲಿ ಮಾಹೆಯಾನ ರೂ. ೫೦೦, ರೂ. ೪೦೦ ಹಾಗೂ ರೂ. ೩೦೦ ಗಳ ವೇತನವನ್ನು ಕ್ರಮವಾಗಿ ಕೊಡಲು ಈ ಷರತ್ತುಗಳ ಮೇಲೆ ಒಪ್ಪಿರುತ್ತದೆ.

(೧) ಸಂಸ್ಥೆಯು ಬೇರಾವ ಕೆಲಸವನ್ನು ಕೊಟ್ಟರೂ ಈಗಿರುವ ಕೆಲಸದೊಂದಿಗೆ ಅಥವಾ ಅದರ ಬದಲಾಗಿ ಮಾಡಲು ಒಪ್ಪುವುದು.

(೨) ಈಗಿರುವ ಕೆಲಸವನ್ನು ವಿದ್ಯಾರ್ಹತೆಗೆ ಅನುಗುಣವಾಗಿ ಬದಲಾಯಿಸಲು ಒಪ್ಪುವುದು. ನೌಕರರಿಂದ ಈ ಷರತ್ತುಗಳಿಗೆ ಒಪ್ಪಿಗೆಯನ್ನು ನಿರೀಕ್ಷಿಸಲಾಗಿದೆ.

ದಿನಗೂಲಿ ನೌಕರರ ಮಂಖ್ಯಿ ಬೇಡಿಕೆಗಳು ಈ ಕೆಳಕಂಡಂತಿವೆ.

(೧) ೧-೪-೧೯೮೫ ರಿಂದ ಕಾಲಿಕ ಶ್ರೇಣಿ (Time Scale)

(೨) ಶಾಸನಬದ್ಧ ಸೌಲಭ್ಯಗಳು

ಸಂಸ್ಥೆಯು ದಿನಗೂಲಿ ನೌಕರರಿಗೆಲ್ಲ ಕಾಲಿಕ ಶ್ರೇಣಿ ಸೌಲಭ್ಯವನ್ನು ಕೊಡುವ ಪರಿಸ್ಥಿತಿಯಲ್ಲಿಲ್ಲ. ಕಾರಣ ಏನೆಂದರೆ ಈಗಿರುವ ಸೌಡೆ ಅಂಗಡಿಗಳು ತಿಂಗಳಿನಲ್ಲಿ ಕೇವಲ ೧೦-೧೨ ದಿನಗಳು ಮಾತ್ರ ಕೆಲಸ ಮಾಡುತ್ತಿವೆ. ಅಂದರೆ ದಿನಗೂಲಿ ನೌಕರರಿಗೆ ಪೂರ್ಣ ಪ್ರಮಾಣದ ಕೆಲಸವನ್ನು ಒದಗಿಸಲು ಸಾಧ್ಯವಾಗಿಲ್ಲ ಆದುದರಿಂದ ಎಲ್ಲಿ ಸಾಧ್ಯವೋ ಅಲ್ಲಿ ಕಾಲಿಕ ಶ್ರೇಣಿಯನ್ನು ಕೊಡಲಾಗುತ್ತಿದೆ. ಈಗಾಗಲೇ ೪ ಜನ ವಾಹನ ಚಾಲಕರಿಗೂ ಹಾಗೂ ೭ ಜನ ಮಿಲ್ಲಿನ ಕಾರ್ಮಿಕರಿಗೂ ಕಾಲಿಕ ಶ್ರೇಣಿಯನ್ನು ಕೊಡಲಾಗಿದೆ ಇನ್ನೂ ಕೆಲವು ನೌಕರರಿಗೆ ಈ ಸೌಲಭ್ಯವನ್ನು ಕೊಡಲು ಯೋಜಿಸಲಾಗುತ್ತಿದೆ.

ಮೇಲೆ ತಿಳಿಸಿದಂತೆ ನೌಕರರು ಸಾಮಾನ್ಯವಾಗಿ ತಿಂಗಳೊಂದಕ್ಕೆ ೧೦ ಅಥವಾ ೧೨ ದಿನ ಮಾತ್ರ ಕೆಲಸ ನಿರ್ವಹಿಸಿತ್ತಿರುವುದರಿಂದ ಸಂಬಳರಹಿತ ವಾರ್ಷಿಕ ರಜೆಯನ್ನು ಬಿಟ್ಟು ಉಳಿದೆಲ್ಲ ಶಾಸನಬದ್ಧ ಸೌಲಭ್ಯಗಳನ್ನು ಅವರಿಗೆ ಕೊಡಲಾಗಿದೆ. ಈ ಬಗ್ಗೆ ಕರ್ನಾಟಕ ಶಾಪ್ಸ್ ಅಂಡ್ ಕಮರ್ಷಿಯಲ್ ಆಕ್ಟ್‌ನ ವಿಧಿ ೬ (೪) ರ ಪ್ರಕಾರ ವಿನಾಯಿತಿ ಕೋರಲಾಗಿದೆ. ಒಂದು ಪಕ್ಷ ವಿನಾಯಿತಿ ದೊರೆಯದಿದ್ದಲ್ಲಿ ವೇತನ ಸಹಿತ ವಾರ್ಷಿಕ ರಜೆ ಸೌಲಭ್ಯವನ್ನು ನೌಕರರಿಗೆ ವಿಸ್ತರಿಸಲಾಗುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಕಾರ್ಮಿಕ ೧-೧-೮೫ ಕ್ಕೆ ದಿನಗೂಲಿಗಾರರು ಯಾರು ೨೪೦ ದಿವಸ ಸೇವೆಯನ್ನು ಸಲ್ಲಿಸಿರುತ್ತಾರೋ ಅಂಥವರನ್ನು ಖಾಯಂ ಮಾಡಬೇಕು ಎನ್ನುವ ದಕ್ಕೆ ಒಂದು ಉಪಸಮಿತಿಯನ್ನು ಮಾಡಿದ್ದರು ಅವರು ಈ ವಿಷಯದಲ್ಲಿ ಮತ್ತು ರೂಲ್ಸ್‌ಗನುಗುಣವಾಗಿ ಅಂಥ ನೌಕರರನ್ನು ಖಾಯಂ ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡಿದ್ದಾರೆ. ಇದಕ್ಕೆ ಸರ್ಕಾರದ ಮಟ್ಟದಲ್ಲೂ ಕೂಡ ಒಪ್ಪಿಗೆ ದೊರೆತಿದೆ ಈ ಉಪಸಮಿತಿಯು ಇದರ ಬಗ್ಗೆ ಏನು ತೀರ್ಮಾನ ಮಾಡಿತು ಇದು ಆ ನೌಕರರಿಗೆ ತಿಳಿದು ಬಂದಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ ಈಗ ಅವರಿಗೆ ಏನು ಅನ್ಯಾಯವಾಗಿದೆ, ಅದು ಪ್ರಾಮುಖ್ಯವಾದುದು. ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದು ಕೊಂಡಿದ್ದಾರೆ ಅದನ್ನು ನಾನು ತಿಳಿಯುವುದಕ್ಕೆ ಬಯಸುತ್ತೇನೆ.

ಎರಡನೆಯದಾಗಿ, ಅವರು ಶಾಸನಬದ್ಧವಾಗಿ ಇರತಕ್ಕಂಥ ಸೌಲಭ್ಯಗಳನ್ನು ಪರಿಪೂರ್ಣವಾಗಿ ಪಡೆಯುವುದಕ್ಕೆ ಏನು ಅಡಚಣೆ ಆಗಿದೆ. ೨-೩ ದಿವಸದಲ್ಲಿ ಇದನ್ನು ಪೂರೈಕೆ ಮಾಡಿಕೊಡುತ್ತೀರಾ ? ತಾವು ಕಟ್ಟಿಗೆ ವ್ಯವಹಾರದ ಒಂದು ನೆಪ ಇಡುವುದು ಇದರ ಬಗ್ಗೆ ಸರಿಯಲ್ಲ ಕೊಟ್ಟ ಕೆಲಸವನ್ನು ಮಾಡುವುದಕ್ಕೆ ಅವರು ತಯಾರಿದ್ದಾರೆ ಹಾಗೆ ಇದ್ದರೂ ಕೂಡ ನಿಮ್ಮ ಲಾಭ ಲುಕ್ಸಾನು ನೋಡಿ ಕೊಂಡು ಅವರ ಜೀವನವನ್ನು ತೀರ್ಮಾನ ಮಾಡತಕ್ಕಂಥಾದ್ದು ಸಾಧುವಾದುದಲ್ಲ ಹಿಂದೆ ಇದ್ದ ತೀರ್ಮಾನವನ್ನೇ ಕಾರ್ಯಗತಗೊಳಿಸಬೇಕು ಎಂದು ನಾನು ಒತ್ತಾಯ ಪಡಿಸುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—ಈ ಬಗ್ಗೆ ಸರ್ಕಾರ ತೀವ್ರ ಆಲೋಚನೆ ಮಾಡುತ್ತಿದೆ. ಇದು ಒಂದು ಮಾನವೀಯ ಸಮಸ್ಯೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಬಗೆಹರಿಸಲಿಕ್ಕೆ ಈಗಾಗಲೇ ನಾವು ೪-೫ ಮೀಟಿಂಗ್ ನಡೆಸಿದ್ದೇವೆ ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಈಗ ಅವರಿಗೆ ಹೊಸ ವೇತನ ಏನು ಕೊಟ್ಟಿದ್ದೇವೆ ಅದನ್ನು ಅವರು ಒಪ್ಪಲ್ಲ ಅದನ್ನು ಅವರು ಒಪ್ಪಿಕೊಂಡರೆ ಈ ಸಮಸ್ಯೆಯನ್ನೂ ಸಹ ಬಗೆಹರಿಸು

ವುದಕ್ಕೆ ಸಾಧ್ಯವಾಗುತ್ತಿತ್ತು. ಕಟ್ಟಿಗೆ ನೆಪ ಹೂಡಿಕೊಂಡು ಇದನ್ನು ಮುಂದಕ್ಕೆ ಹಾಕಿತ್ತಾರೆ ಎಂದು ಹೇಳುವುದು ಸರಿಯಲ್ಲ ಆದಷ್ಟು ಜಾಗ್ರತೆ ಸರ್ಕಾರ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಪಡುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಕರರ ಪ್ರತಿನಿಧಿಗಳನ್ನು ತಮ್ಮನ್ನು ಭೇಟಿ ಮಾಡುವಂತೆ ತಿಳಿಸುತ್ತೇನೆ ತಾವು ಇದರ ಬಗ್ಗೆ ಅವರೊಂದಿಗೆ ವಿಚಾರ ವಿನಿಮಯ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನಾನು ಈ ಸಲಹೆಯನ್ನು ಕೊಡುತ್ತೇನೆ.

ಶ್ರೀ ಬಿ.ಎ. ಜೀವಿಜಯ.—ಯಾರೋ ಯಾರೋ ಬಂದು ಕಂಡಿದ್ದಾರೆ ಅವರೊಂದಿಗೆ ಮೀಟಿಂಗ್ ಮಾಡಿದ್ದೇವೆ ಚರ್ಚೆ ಮಾಡಿದ್ದೇವೆ ಸರ್ಕಾರ ಈ ಸಮಸ್ಯೆಯ ಬಗ್ಗೆ ಆದಷ್ಟು ಬೇಗನೆ ಒಂದು ಸೂಕ್ತ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ದೇವರ ಜೀವನಹಳ್ಳಿ ಹಾಗೂ ಸುತ್ತಮುಂಚ್ಚಲಿನ ಪ್ರದೇಶಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ಮಂಜೂರು ಮಾಡುವ ವಿಚಾರದ ಬಗ್ಗೆ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ಉತ್ತರ ಕೊಡುವವರು ಯಾರು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಯೋಜನಾ ಸಚಿವರು).—ಅಧ್ಯಕ್ಷರೆ ಮಾನ್ಯ ಸದಸ್ಯರು ಬರವಣಿಗೆಯಲ್ಲಿ ಕೊಟ್ಟಿರತಕ್ಕಂಥದ್ದು ಇನ್ನೂ ನನಗೆ ಖುಂದಿಲ್ಲ. ಸ್ವಲ್ಪ ಟೈಮ್ ಕೊಟ್ಟರೆ ಆ ಮೇಲೆ ಹೇಳುತ್ತೇನೆ.

ಅಧ್ಯಕ್ಷರು.—ಉತ್ತರ ತಯಾರಿಲ್ಲ ಆಮೇಲೆ ತೆಗೆದುಕೊಳ್ಳೋಣ.

ಹಳೆಯ ಸಂಚಾರಿ ಕಣ್ಣಿನ ಘಟಕವನ್ನು ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಯಿಂದ ದಾವಣಗೆರೆ ಸಿ. ಜಿ. ಆಸ್ಪತ್ರೆಗೆ ಸ್ಥಳಾಂತರಿಸುವ ಬಗ್ಗೆ

ಡಾ॥ ಬಿ. ಎಂ. ತಿಪ್ಪೇಸ್ವಾಮಿ.—ಮಾನ್ಯ ಅಧ್ಯಕ್ಷರೆ, ಹಳೆಯ ಸಂಚಾರಿ ಕಣ್ಣಿನ ಘಟಕವನ್ನು ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಯಿಂದ ದಾವಣಗೆರೆ ಸಿ. ಜಿ. ಆಸ್ಪತ್ರೆಗೆ ಸ್ಥಳಾಂತರಿಸುವ ವಿಚಾರದ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಯೋಜನಾ ಸಚಿವರು).—ಅಧ್ಯಕ್ಷರೆ, ಮಾನ್ಯ ತಿಪ್ಪೇಸ್ವಾಮಿಯವರು ಕೇಳಿರುವ ಗಮನ ಸೆಳೆಯುವ ಸೂಚನೆ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ.

ಕರ್ನಾಟಕ ರಾಜ್ಯದಲ್ಲಿ ಜನತೆಯ ದೃಷ್ಟಿಹೀನತೆ (ಕುರುಡುತನ) ನಿವಾರಣೆ ಮೊದಲು ''ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ'' ಭಾರತ ಸರಕಾರವು ೧೯೮೦-೮೧ರಲ್ಲಿ ಮೂರು (೩) ಮತ್ತು ೧೯೮೨-೮೩ರಲ್ಲಿ ಒಂದು (೧) ಒಟ್ಟು ನಾಲ್ಕು ಸಂಚಾರಿ ನೇತ್ರ ರೋಗ ಚಿಕಿತ್ಸಾ ಘಟಕಗಳನ್ನು ಮಂಜೂರು ಮಾಡಿದ್ದು ಅವುಗಳನ್ನು ವಿಭಾಗೀಯ ಕೇಂದ್ರ ಸ್ಥಳಗಳಾದ ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಗಳಲ್ಲಿ ವೈದ್ಯಕೀಯ ಕಾಲೇಜು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಒಳಪಟ್ಟಂತೆ ಅಳವಡಿಸಲಾಗಿದ್ದು. ಈ ಎಲ್ಲಾ ಘಟಕಗಳೂ ಈಗ ಕಾರ್ಯಾರಂಭ ಮಾಡುತ್ತಿವೆ.

ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ ಭಾರತ ಸರ್ಕಾರವು ಸಂಚಾರಿ ನೇತ್ರ ರೋಗ ಚಿಕಿತ್ಸಾ ಘಟಕಗಳನ್ನು ಮಂಜೂರು ಮಾಡುವುದಕ್ಕಿಂತ ಮೊದಲು ಬೆಂಗಳೂರಿನಲ್ಲಿರುವ ಮಿಂಟೋ ಕಣ್ಣಿನ ಆಸ್ಪತ್ರೆಯಲ್ಲಿ ಸಂಚಾರಿ ನೇತ್ರ ರೋಗ ಚಿಕಿತ್ಸಾ ಘಟಕವೊಂದು ಯೋಜನೆಯೇತರದಡಿಯಲ್ಲಿ ಸ್ಥಾಪಿಸಲಾಗಿತ್ತು. ಭಾರತ ಸರಕಾರದಿಂದ ಹೊಸ ಘಟಕಗಳ ಸ್ಥಾಪನೆಯಾದ ನಂತರ ಹಳೆಯ ಘಟಕವನ್ನು ಚಿತ್ರದುರ್ಗ ಜಿಲ್ಲೆಯ 'ದಾವಣಗೆರೆ' ನಗರಕ್ಕೆ ವರ್ಗಾಯಿಸಲು ಮಾರ್ಚ್ ೧೯೮೩ರಲ್ಲಿ ಆದೇಶ ಹೊರಡಿಸಲಾಯಿತು. ಆದರೆ ಈ ಸಂಚಾರಿ ವಾಹನವು ತುಂಬಾ ಹಳೆಯದಾದ್ದರಿಂದಲೂ ಅದು ಹೆಚ್ಚಿನ ದುರಸ್ತಿ ಕಾರ್ಯವನ್ನು ಹೊಂದಿದ್ದರಿಂದಲೂ ಈ ಘಟಕವನ್ನು ಬೆಂಗಳೂರಿನಿಂದ ದಾವಣಗೆರೆಗೆ ವರ್ಗಾಯಿಸಲು